## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

### ಸಿ.ಸಿ. ನಂ.1770/2021

ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಹೆಸರು | ಅನಂತಮ್ಮ | ಸಿಡಬ್ಲ್ಯೂ-5 |
| ತಂದೆಯ ಹೆಸರು | ತಿಪ್ಪೇಸ್ವಾಮಿ | ಪಿ ಡಬ್ಲ್ಯೂ-4 |
| ವಯಸ್ಸು | 50 ವರ್ಷ | |
| ಉದ್ಯೋಗ | ಕೂಲಿಕೆಲಸ | |
| ವಾಸಸ್ಥಳ | ಮಲ್ಲೂರಹಳ್ಳಿ | ದಿಃ02-08-2025. |

### ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ. ರವರಿಂದಃ

ಚಾಸಾ-1 ನನ್ನ ತಮ್ಮ. ಚಾಸಾ-2 ನನ್ನ ತಮ್ಮನ ಹೆಂಡತಿ. ಚಾಸಾ-3 ಮತ್ತು 4 ನನಗೆ ಗೊತ್ತು. ಚಾಸಾ-6 ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಈಗ್ಗೆ 4 ವರ್ಷಗಳ ಹಿಂದೆ ಬೆಳಿಗ್ಗೆ 8-00 ರಿಂದ 9-00 ಗಂಟೆ ಸುಮಾರಿಗೆ ಮಲ್ಲೂರಹಳ್ಳಿಯಿಂದ ಕಪಿಲೆಗೆ ಬರುವಾಗ ಆರೋಪಿ ಮತ್ತು ಚಾಸಾ-1 ರವರು ಜಗಳವಾಡುತ್ತಿದ್ದರು. ಸದರಿ ಸಮಯದಲ್ಲಿ ಚಾಸಾ-1 ರವರಿಗೆ ಆರೋಪಿಗೆ ಕೈಯಿಂದ ಮತ್ತು ಕಲ್ಲಿನಿಂದ ಎದೆಗೆ ಹೊಡೆದಿರುತ್ತಾರೆ. ಬಾಕಿ ವಿಚಾರ ನನಗೆ ತಿಳಿದಿಲ್ಲ. ಸಾಕ್ಷಿಯು ಮು.ಮಾ-1 ನ್ನು ನೋಡಿ ಆರೋಪಿಯು ಚಾಸಾ-1 ರವರಿಗೆ ಸದರಿ ಕಲ್ಲಿನಿಂದ ಹೊಡೆದರೋ ಇಲ್ಲವೋ ಎಂಬುದು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಪೊಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

### ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ

ದಿಃ15-04-2021 ರಂದು ಬೆಳಿಗ್ಗೆ 7-00 ಗಂಟೆಗೆ ಚಾಸಾ-1 ಮತ್ತು ಆರೋಪಿಯ ನಡುವೆ ಜಗಳ ಆಗಿರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ಆರೋಪಿಯು ಚಾಸಾ-1 ರವರಿಗೆ ಸೂಳೆಮಗನೇ ಬೊಳಿಮಗನೇ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. ಸದರಿ ಜಗಳವನ್ನು ನಾನು ಮತ್ತು ಚಾಸಾ-3, 4 ರವರು ಬಿಡಿಸಿರುತ್ತೇವೆ ಎಂದರೆ ಸರಿ. ಗಲಾಟೆಯ ನಂತರ ಚಾಸಾ-1 ರವರನ್ನು ಚಾಸಾ-2 ರವರು ಚಿಕಿತ್ಸೆಗಾಗಿ ಆ್ಯಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋದರು ಎಂದರೆ ಸರಿ. ಆರೋಪಿಯು ಚಾಸಾ-1 ರವರಿಗೆ ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ ಗಲಾಟೆಯಾದ ದಿನ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಟಿ ಟಿ., ಆರೋಪಿಯ ಪರ ವಕೀಲರಿಂದಃ**

ಮಲ್ಲೂರಹಳ್ಳಿಯಿಂದ ಕಪಿಲೆಗೆ ಬಟ್ಟೆಯನ್ನು ಹೋಲಿಸಿಕೊಳ್ಳಲು ಹೋಗಿರುತ್ತೇನೆ. ಮಲ್ಲೂರಹಳ್ಳಿಯಿಂದ ಕಪಿಲೆಗೆ ಎಷ್ಟು ಗಂಟೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಕಾಲ್ನಡಿಗೆಯಲ್ಲಿ 2-3 ತಾಸು ಆಗುತ್ತದೆ ಎಂದು ನುಡಿಯುತ್ತಾರೆ. ಚಾಸಾ-4 ರವರ ಮನೆಯ ಹತ್ತಿರ ಸುಮಾರು ಬೆಳಿಗ್ಗೆ 8-9 ಗಂಟೆಗೆ ಬಂದಿರುತ್ತೇನೆ. ಆರೋಪಿಗೂ ಮತ್ತು ಚಾಸಾ-1 ರವರಿಗೆ ಮೊದಲಿನಿಂದಲೂ ದ್ವೇಷ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೂ ಮತ್ತು ಚಾಸಾ-1 ರವರಿಗೆ ಒಬ್ಬರಿಗೊಬ್ಬರು ಕಂಡರೆ ಆಗುವುದಿಲ್ಲ ಎಂದರೆ ಸರಿ. ನಾನು ಇದೇ ಮೊದಲನೆಬಾರಿಗೆ ಹೇಳಿಕೆ ನೀಡುತ್ತಿದ್ದೇನೆ ಎಂದರೆ ಸರಿ. ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ದಿಃ15-04-2021 ರಂದು ಬೆಳಿಗ್ಗೆ 7-00 ಗಂಟೆಗೆ ಚಾಸಾ-1 ಮತ್ತು ಆರೋಪಿಯ ನಡುವೆ ಜಗಳ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಆರೋಪಿಯು ಚಾಸಾ-1 ರವರಿಗೆ ಸೂಳೆಮಗನೇ ಬೋಳಿಮಗನೇ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಗಳವನ್ನು ನಾನು ಮತ್ತು ಚಾಸಾ-3, 4 ರವರು ಬಿಡಿಸಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯ ನಂತರ ಚಾಸಾ-1 ರವರನ್ನು ಚಾಸಾ-2 ರವರು ಚಿಕಿತ್ಸೆಗಾಗಿ ಆ್ಯಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-1 ರೀತಿಯ ಕಲ್ಲುಗಳು ಗ್ರಾಮದಲ್ಲಿ ಬಹಳಷ್ಟು ಸಿಗುತ್ತವೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ